**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/04/ಇಎಸ್‌ಟಿ/2(ಬಿ)/2019-20 (ಭಾಗ-2)

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001,
ದಿನಾಂಕ: 31.07.2019.

**ಜ್ಞಾಪನ**

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರಿಗೆ ವಿವಿಧ ಇಲಾಖೆಗಳಲ್ಲಿ ಅರ್ಜಿ ಅಹ್ವಾನಿಸಲಾಗಿರುವ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:**
1. ಪ್ರಾಚಾರ್ಯರು, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಕಲಬುರ್ಗಿ, ಇವರ ಪತ್ರ ಸಂಖ್ಯೆ: ಜೆಟಿಎಸ್/ಕ/ಪ್ರವೇಶ/2019-20, ದಿನಾಂಕ: 12.06.2019.
2. ಪ್ರಾಚಾರ್ಯರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರ್ಗಿ, ಇವರ ಪತ್ರ ಸಂಖ್ಯೆ:ಸಮಪಾಕ/ ಸಿಬ್ಬಂದಿ/ 2019-20, ದಿನಾಂಕ: 15.06.2019.
3. ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಕಲಬುರ್ಗಿ, ಇವರ ಪತ್ರ ಸಂಖ್ಯೆ: ಸಪಕ/ಸಿಬ್ಬಂದಿ/2018-19, ದಿನಾಂಕ: 12.06.2019.
4. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಡಿಟಿಇ/34/ಇಎಸ್‌ಟಿ (2) ಬಿ/2018-19, ದಿನಾಂಕ: 10.04.2019.

****--****

ಉಲ್ಲೇಖ (1), (2) ಮತ್ತು (3) ರ ಪತ್ರಗಳಲ್ಲಿ, ಸರ್ಕಾರಿ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರು ವಿವಿಧ ಇಲಾಖೆಗಳಲ್ಲಿ ಅರ್ಜಿ ಅಹ್ವಾನಿಸಲಾಗಿರುವ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ಕೋರುವ ಪ್ರಸ್ತಾವನೆಗಳಾಗಿರುತ್ತವೆ. ಸದರಿ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಉಪನ್ಯಾಸಕರ ಹೆಸರು (ಶ್ರೀಯುತರಾದ) ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ವಿಭಾಗ | ಅರ್ಜಿ ಸಲ್ಲಿಸಲು ಕೋರಲಾದ ಹುದ್ದೆ/ಪರೀಕ್ಷೆ ಮತ್ತು ಇಲಾಖೆ/ಪರೀಕ್ಷಾ ಪ್ರಾಧಿಕಾರ | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ಪ್ರಸ್ತಾವನೆಯ ದಿನಾಂಕ | ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸ್ವೀಕೃತಗೊಂಡ ದಿನಾಂಕ |
|---|---|---|---|---|---|---|
| (1) | (2) | (3) | (4) | (5) | (6) | (7) |
| 1. | **ಶ್ರೀ ತ್ರಿಮುಖೆ ದಿಗಂಬರ,** ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರ್ಗಿ. | ಸಿ.ಎಸ್ | ಸಹಾಯಕ ಪ್ರಾಧ್ಯಾಪಕರು, ಕೇಂದ್ರೀಯ ವಿಶ್ವವಿದ್ಯಾಲಯ, ರಾಜಸ್ಥಾನ. | 15.06.2019 | 15.06.2019 | 20.06.2019 |
| 2. | **ಶ್ರೀ ವಸಂತ,** ಸರ್ಕಾರಿ ಪಾಲಿಟೆಕ್ನಿಕ್, ಕಲಬುರ್ಗಿ. | ವಿದ್ಯುತ್ | ಸಹ ಪ್ರಾಧ್ಯಾಪಕರು, ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ. | 12.06.2019 | 12.06.2019 | 25.06.2019 |
| 3. | **ಶ್ರೀ ಮಂಜುನಾಥ,** ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಕಲಬುರ್ಗಿ | ಆಂಗ್ಲ | ಸಹಾಯಕ ಪ್ರಾಧ್ಯಾಪಕರು, ಕೇಂದ್ರೀಯ ವಿಶ್ವವಿದ್ಯಾಲಯ, ಕರ್ನಾಟಕ. | 12.06.2019 | 12.06.2019 | 25.06.2019 |

ಮು.ತಿ.ನೋ.

ಈ ಬಗ್ಗೆ ಪರಿಶೀಲಿಸಲಾಗಿ, ಉಲ್ಲೇಖ (4)ರ ನಿರ್ದೇಶನಾಲಯದ ಸುತ್ತೋಲೆ ದಿನಾಂಕ: 10.04.2019ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ / ಭೋಧಕೇತರ ಸಿಬ್ಬಂದಿಗಳು ಕೇಂದ್ರ/ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿ ಆಹ್ವಾನಿಸಲಾಗುವ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಕೋರಿ ನಿರ್ದೇಶನಾಲಯಕ್ಕೆ ಮನವಿ ಸಲ್ಲಿಸುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಅದರಲ್ಲಿ ನಿರಾಕ್ಷೇಪಣ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಕ್ಕಿಂತ 15 ದಿನಗಳೊಳಗಾಗಿ ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಕೆಯಾಗಬೇಕೆಂದು ತಿಳಿಸಲಾಗಿರುತ್ತದೆ. ಆದರೆ ಸದರಿ ಪ್ರಸ್ತಾವನೆಗಳು ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದ ನಂತರ ಸ್ವೀಕೃತಗೊಂಡಿರುತ್ತದೆ. **ಆದ್ದರಿಂದ ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪಮಾಣ ಪತ್ರ ಕೋರಲಾದ ಮನವಿಗಳನ್ನು ಪುರಸ್ಕರಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ.** ಇನ್ನು ಮುಂದೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಕೋರಿ ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಸುವಾಗ ಉಲ್ಲೇಖ(4)ರಲ್ಲಿನ ನಿರ್ದೇಶನಾಲಯದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಪಾಲಿಸುವಂತೆ ಮೇಲ್ಕಂಡ ಸಂಸ್ಥೆಗಳ ಪ್ರಾಚಾರ್ಯರಿಗೆ ತಿಳಿಸಲಾಗಿದೆ.

**"ಕರಡು ನಿರ್ದೇಶಕರಿಂದ**
**ಅನುಮೋದಿಸಲ್ಪಟ್ಟಿದೆ"**

**ಆಡಳಿತಾಧಿಕಾರಿ**
**ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ**

ಇವರಿಗೆ:

ಮೇಲ್ಕಂಡ ಉಪನ್ಯಾಸಕರಿಗೆ (ಪ್ರಾಚಾರ್ಯರ ಮೂಲಕ).

ಪ್ರತಿ:

1. ಪ್ರಾಚಾರ್ಯರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರ್ಗಿ.
2. ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಕಲಬುರ್ಗಿ.
3. ಪ್ರಾಚಾರ್ಯರು, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಕಲಬುರ್ಗಿ.
4. ಇ-ಆಡಳಿತ ವಿಭಾಗಕ್ಕೆ.
5. ಕಛೇರಿ ಪ್ರತಿ.